MR. SPEAKER.—Have you got a copy of the trust deed showing the beneficiaries of the trust? Without knowing that, how can you ask this supplementary?

Sri G. V. GOWDA.—Without obtaining all the assests due to the State of Mysore why did our Government accept to pay the liabilities?

MR. SPEAKER.—Is it left to our option to say that we reject it. Certain liabilities have been made over to us. The final accounting is not over. This is a process.

Sri G. V. GOWDA.—Our Government could have deferred the payment of liabilities until we received our assets.

MR. SPEAKER.—Then the assets also would have been withheld.

Sri G. V. GOWDA.—Would we be getting interest for the assets for all these years from the date of reorganisation?

Sri S. NIJALINGAPPA.—I do not think we can go on asking for such things from a sister State.

Sri MUCKANNAPPA.—What is the share we got from the Hyderabad Life Insurance Fund? What is the total amount?

Sri S. NIJALINGAPPA.—15%. The details are not given here. They are being worked out.

ಶ್ರೀ ಗಂಗಾಧರ ನಾಮೋಷಿ.—ನ್ಯಾಷನಲೈಸ್ ಆಗಿರತಕ್ಕ ಕೆಲವು ಬಸ್ಸುಗಳನ್ನು ಡಿಸ್‌ಇಂಟಿಗ್ರೇಷ್ ಆದ ಕಾಲಕ್ಕೆ ರೋಡ್ ಮೇಲೆ ಕಡಿಮೆ ಬೀಳುತ್ತವೆ ಎಂದು ಹೇಳಿ ಆ ಮೇಲೆ ಟ್ರಾನ್ಸ್‌ಫರ್ ಮಾಡುತ್ತೇವೆ ಎಂದು ಹೇಳಿದರು. ಅವನ್ನು ಇದುವರೆಗೂ ಟ್ರಾನ್ಸ್‌ಫರ್ ಮಾಡಿಲ್ಲ ಎಂಬುದು ಗೊತ್ತೇ?

ಶ್ರೀ ಎಸ್. ನಿಜಲಿಂಗಪ್ಪ.—ಇನ್ನು ಕೆಲವು ಪ್ರಾಪರ್ಟೀಸ್ ಕಳುಹಿಸಿಲ್ಲ. ಆಷ್ಟು ಹಣ ಕೊಡ ಬೇಕೆಂದು ಡಿಮ್ಯಾಂಡ್ ಮಾಡಿದ್ದೇವೆ. ಅದು work out ಆಗುತ್ತಾ ಇದೆ.

Sri S. SIVAPPA.—I have been bringing to your notice often and often that several questions have not been answered though they were sent about several months back. Some of the questions could be answered from the information from the Secretariat itself. Probably they are inconvenient questions and that is why they have not been answered.

MR. SPEAKER.—There is no need to attribute motives.

Sri S. SIVAPPA.—The answer to the questions can be had from the Secretariat record itself.

MR. SPEAKER.—I could very well understand the importance of the questions.

Sri S. NIJALINGAPPA.—I will look into the matter and I am looking into the matter. Of course these things cannot be collected in a very short time. I will see that the questions are answered as early as possible. If the information is available in the Secretariate itself, I will see that answers to such questions are given within a week hereafter.

MR. SPEAKER.—The replies must come; they have got to be translated and printed and all that, then I must also appeal to the Hon'ble Members to be present to put their questions. Look at the fate of two questions of today. The concerned members are not present to put them and they have not even authorized somebody to put them. It is embarrassing to the chair to put such questions.

——

Deputation of High School Teachers for Post-Graduate Studies in the State.

*Q.—273. Sri A. P. APPANNA (Virajpet).—

Will the Government be pleased to state:—

(*a*) the number of High School teachers who had applied to the

(Sri A. P. APPANNA)

Government for deputing them by the Department for Post-Graduate Studies in Mysore State this year;

(*b*) the number of them who have been deputed by the Government for the same;

(*c*) what is the District-wise break up of the applications and the teachers actually deputed;

(*d*) on what basis the teachers have been selected and deputed?

A.—Sri S. R. KANTHI (Minister for Education).—

(*a*) 687 teachers.

(*b*) 84 teachers

(*c*) *Vide* statement appended.

(*d*) Merit, regional representation, subject requirements, requirements of schools and backwardness of community.

STATEMENT

Showing the number of applications received and number of teachers selected for Post-Graduade Courses during 1962-63.

Sl. No.	Number of applications received and District-wise figure form the following Districts.	No. received	No selected
1	Bangalore City	80	5
2	Bangalore District	50	7
3	Kolar	38	4
4	Tumkur	47	9
5	Mysore	92	14
6	Mandya	21	3
7	Coorg	8	3
8	South Kanara	16	2
9	Chitradurga	54	5
10	Shimoga	29	4
11	Chikmagalur	27	2
12	Hassan	19	2
13	Dharwar	36	4
14	North Kanara	3	Nil
15	Belgaum	10	1
16	Bijapur	26	8
17	Gulbarga	63	8
18	Bidar	25	Nil
19	Raichur	22	2
20	Bellary	21	1
	Total	687	84

Sri S. SIVAPPA.—What is the policy of the Government in taking the decision to depute teachers for Post-Graduate Courses?

†ಶ್ರೀ ಎಸ್. ಆರ್. ಕಂಠಿ.—ರೀಜನಲ್ ರೆಪ್ರಸೆಂಟೇಷನ್ ಕೊಡಬೇಕೆಂದು ಇದೆ. 5 ವರ್ಷ ಸರ್ವೀಸ್ ಆಗಿರಬೇಕು. ಬ್ಯಾಕ್‌ವರ್ಡ್ ಕಮ್ಯೂನಿಟಿ ಆಗಿದ್ದರೆ 4 ವರ್ಷ ಆಗಿರಬೇಕು. ಎಸ್.ಸಿ., ಎಸ್.ಟಿ. ಆಗಿದ್ದರೆ 3 ವರ್ಷ ಆಗಿರಬೇಕೆಂದು ಇದೆ.

Sri S. SIVAPPA.—Has Government decided on the policy of shifting the Pre-University Course to the Higher Secondary Schools?

Sri S. R. KANTHI.—That is not the policy of the Government. Government intends to start the XIth standard.

Sri G. V. GOWDA.—If Government starts the XIth standard, is it not necessary to train Post-Graduate M.A. teachers and post them there?

Sri S.R. KANTHI.—Unless we have Post-Graduate teachers we cannot start the XIth standard.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಈ 84 ಮಂದಿ ಉಪಾಧ್ಯಾಯರುಗಳಲ್ಲಿ ಮಹಿಳಾ ಉಪಾಧ್ಯಾಯರು ಎಷ್ಟು ಮಂದಿ ಇದ್ದಾರೆ?

ಶ್ರೀ ಎಸ್.ಆರ್. ಕಂಠಿ.—ತಕ್ಷಣ ಅದನ್ನು ಹೇಳುವುದಕ್ಕಾಗುವುದಿಲ್ಲ.

Sri G. V. GOWDA.—When such is the position why don't we get many teachers posted for Post-Graduate training?

Sri S. R. KANTHI.—During the plan period we have made a provision to train 350 graduates. Last year we sent 132 and this year we have sent 84.

ಶ್ರೀಮತಿ ಅನ್ನಪೂರ್ಣಬಾಯಿ.— ಬಿದರ್‌ನಲ್ಲಿ ಅರ್ಜಿಬಂದ ಸಂಖ್ಯೆ 25 ಎಂದು ಹೇಳಿದ್ದಿರಿ. ಆಯ್ಕೆ ಆದ ಸಂಖ್ಯೆ ಒಂದೂ ಇಲ್ಲ. ಆ ರೀತಿ ಕೊಡಲಾರದ ಕಾರಣವೇನು?

ಶ್ರೀ ಎಸ್. ಆರ್. ಕಂಠಿ.—ಒಟ್ಟು ನೋಡುತ್ತಾ ಇದ್ದೀವೆ. ಹೋದ ವರ್ಷ ಅಲ್ಲಿ ಜಾಸ್ತಿ ಸಿಕ್ಕಿರಬೇಕು. ಈ ವರ್ಷ ಸಿಕ್ಕಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸೆಲೆಕ್ಷನ್ ಮಾಡುವವರು ಯಾರು?

ಶ್ರೀ ಎಸ್. ಆರ್ ಕಂಠಿ.—ಡಿ. ಪಿ. ಐ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಡಿ. ಪಿ. ಐ. ಒಬ್ಬರೇ ಮಾಡುತ್ತಾರೋ, ಕಮಿಟಿ ಇರುತ್ತದೆಯೋ?

ಶ್ರೀ ಎಸ್. ಆರ್. ಕಂಠಿ.—ಡಿ. ಪಿ. ಐ. ಒಬ್ಬರೇ ಮಾಡುತ್ತಾರೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಇದರಲ್ಲಿ ಅವರು ಅನುಸರಿಸತಕ್ಕ ನೀತಿ ಏನು?

ಶ್ರೀ ಎಸ್. ಆರ್. ಕಂಠಿ.—ನೀತಿ ಆಗಲೇ ಹೇಳಿದೆ. ಉತ್ತರದಲ್ಲೂ ಕೂಡ ಇದೆ. ರೀಜನಲ್ ರೆಪ್ರಸೆಂಟೇಷನ್ ಇರಬೇಕೆಂದು ಇದೆ. ಬ್ಯಾಕ್‌ವರ್ಡ್‌ನ್ನನ್ನೇ ನೋಡುತ್ತಾ ಇದ್ದೇವೆ. ಯಾವಯಾವ ಹೈಸ್ಕೂಲಿನಲ್ಲಿ ಅವಶ್ಯಕತೆ ಇದೆ, ಆಯಾಯ ಹೈಸ್ಕೂಲಿಗೆ ಕೊಡುತ್ತಾ ಇದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ನಾರ್ತ್ ಕೆನೆರಾ ಮತ್ತು ಬಿದರ್‌ನಲ್ಲಿ ಯಾರೊಬ್ಬರನ್ನೂ ಸೆಲೆಕ್ಟ್ ಮಾಡದೇ ಇರುವುದಕ್ಕೆ ಕಾರಣ ಅರ್ಹರು ಯಾರೂ ಅಲ್ಲಿ ಇರಲಿಲ್ಲವೇ?

ಶ್ರೀ ಎಸ್. ಆರ್. ಕಂಠಿ.— ಕಾರಣ ಆಗಲೇ ಹೇಳಿದೆ. ಅಲ್ಲಿ ಹೋದ ವರ್ಷ ಸಿಕ್ಕಿದೆ. ಈ ವರ್ಷ ಸಿಕ್ಕಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಎಲ್ಲಕ್ಕಿಂತ ಹೆಚ್ಚಾಗಿ ಮೈಸೂರಿನಲ್ಲಿ 92 ಅರ್ಜಿಗಳು ಬಂದಿವೆ. ಕೇವಲ 14 ಜನರನ್ನು ಆರಿಸಲಾಗಿವೆ. ಉಳಿದವರು ಅನರ್ಹರು ಎಂತಲೇ?

ಶ್ರೀ ಎಸ್. ಆರ್. ಕಂಠಿ.—ಅರ್ಹತೆಮೇಲೆ ತೆಗೆದುಕೊಳ್ಳುವಾಗ ಅರ್ಹತೆ ನೋಡಿ ಕೊಡಬೇಕಾಗುತ್ತದೆ.

ಶ್ರೀ ಎಸ್. ಸುಬ್ಬಯ್ಯನಾಯರ್.—ಅತ್ಯಧಿಕ ಸಂಖ್ಯೆಯಲ್ಲಿ ಅರ್ಜಿಗಳನ್ನು ಹಾಕಿಕೊಂಡಿದ್ದಾಗ್ಯೂ; ಅರಿಸಲಿಕ್ಕೆ, ಉತ್ತಮೋತ್ತಮ ಅರ್ಹತೆ ಇದ್ದವರು ಇದ್ದಾಗ್ಯೂ ಈ ರೀತಿ ಒಂದು, ಎರಡು ಮಂದಿಗಳನ್ನು ಆರಿಸಲಿಕ್ಕೆ ಕಾರಣವೇನು?

ಶ್ರೀ ಎಸ್. ಆರ್. ಕಂಠಿ.—ಹೋದವರ್ಷ ಕಾರಣ ಇದೆ. ಎಂ. ಎ., ಎಂ. ಇಡಿ. ಆದವರು ಬಹಳಜನ ಇದ್ದರು. ಆಗುವುದಿಲ್ಲ ಎಂದು ಹೇಳಿದರು.

Smt. VASANTALATA V. MIRJANKAR.—From the statement appended it is found that no teachers have been selected from Karwar and Bidar. May I know whether Government would consider giving district-wise representation hereafter?

ಶ್ರೀ ಎಸ್. ಆರ್. ಕಂಠಿ.—ಡಿಸ್ಟ್ರಿಕ್ಟ್‌ವೈಸ್ ರೆಪ್ರಸೆಂಟೇಷನ್ ಕೊಡುವುದಕ್ಕಾಗುವುದಿಲ್ಲ. ರೀಜನಲ್ ರೆಪ್ರಸೆಂಟೇಷನ್ ಕೊಡುತ್ತೇನೆ. ಅಲ್ಲಿ ಅವಶ್ಯಕತೆ ಇದ್ದರೆ ಮುಂದಿನ ವರ್ಷ ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸ್ನಾತಕೋತ್ತರ ಶಿಕ್ಷಣ ಪಡೆದವರು ಎಷ್ಟು ಮಂದಿ ಈಗಿನ ಶಾಲೆಗಳಿಗೆ ಬೇಕಾಗಿದೆಯೆಂದು ಹೇಳಲು ಸಾಧ್ಯವೇ.

ಶ್ರೀ ಎಸ್. ಆರ್. ಕಂಠಿ.—ಈ ಪ್ಲಾನ್ ಪೀರಿಯಡ್‌ನಲ್ಲಿ 350 ಮಂದಿಯನ್ನು ತಯಾರಿಸಬೇಕೆಂದಿದೆ. ಹೋದ ವರ್ಷ 137 ಮಂದಿಯನ್ನು ತಯಾರಿಸಲಾಯಿತು. ಈ ವರ್ಷ 84 ಮಂದಿ ತೆಗೆದುಕೊಂಡಿದೆ. ಇನ್ನು ಉಳಿದವರನ್ನು ಮೂರು ವರ್ಷಗಳಲ್ಲಿ ತಯಾರಿಸಲಾಗುವುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ವಿಚಾರದಲ್ಲಿ ಶಾಲೆಗಳ ರಿಕ್ವೈರ್‌ಮೆಂಟ್ ಎಷ್ಟು ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವೆ?

ಶ್ರೀ ಎಸ್. ಆರ್. ಕಂಠಿ.—ಹೈಯರ್ ಸೆಕೆಂಡರಿ ಶಾಲೆಯಾಗಿ ಯಾವ ಶಾಲೆಗಳನ್ನು ಪರಿವರ್ತಿಸ ಬೇಕೆಂಬುದನ್ನು ಮೊದಲು ನಿರ್ಧರಿಸಿ ಆಮೇಲೆ ಎಷ್ಟು ಮಂದಿ ಬೇಕೋ ಅಷ್ಟು ಮಂದಿಯನ್ನು ತರ ಬೇತು ಮಾಡಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಡಿ. ಪಿ. ಐ. ಒಬ್ಬರೇ ಸೆಲೆಕ್ಟ್ ಮಾಡುವುದರಿಂದ ನ್ಯಾಯ ದೊರೆಯುವುದಿಲ್ಲ ಎಂಬುದು ಗೊತ್ತಿದೆಯೆ?

ಶ್ರೀ ಎಸ್. ಆರ್. ಕಂಠಿ.—ಸಮಿತಿ ಮಾಡಿದರೆ ತಾನೆ ನ್ಯಾಯ ದೊರೆಯುತ್ತದೆಂದು ಹೇಗೆ ಹೇಳುವುದು?

ಶ್ರೀ ಪಿ. ವೆಂಕಟಗಿರಿಯಪ್ಪ.—ಕೋಲಾರ ಜಿಲ್ಲೆಯಲ್ಲಿ 38 ಅರ್ಜಿಗಳು ಬಂದರೆ ಕೇವಲ 4 ಜನರಿಗೆ ಮಾತ್ರ ಅವಕಾಶ ಕೊಟ್ಟಿರುವುದಕ್ಕೆ ಕಾರಣವೇನು?

ಶ್ರೀ ಎಸ್. ಆರ್. ಕಂಠಿ.—ಅಲ್ಲಿಗೆ ಅಷ್ಟಾದರೂ ಸಿಕ್ಕಿದೆ, ಕೆಲವು ಕಡೆ ಅಷ್ಟೂ ಸಿಕ್ಕಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೇಡಿಕೆ ಜಾಸ್ತಿ ಇರುವುದರಿಂದ ಹೆಚ್ಚು ಜನರನ್ನು ತರಬೇತು ಮಾಡಲು ಏರ್ಪಾಡು ಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಅದೊಂದು ಸೂಚನೆ, ಪರಿಶೀಲಿಸಲಾಗುವುದು. ಎರಡನೆಯ ಯೋಜನೆಯಲ್ಲಿ 70 ಶಾಲೆಗಳನ್ನು ಸೆಕೆಂಡರಿ ಶಾಲೆಗಳಾಗಿ ಪರಿವರ್ತಿಸಲಾಗಿದೆ, ಮೂರನೆಯ ಯೋಜನೆಯಲ್ಲಿ ನೂರು ಶಾಲೆಗಳಿಗೆ ಅನುಮತಿ ಕೊಟ್ಟಿದೆ. ಈ ರೀತಿ ಮುಂದು ವರೆಯಬೇಕಾಗಿದೆ.

ಶ್ರೀ ಎಸ್. ಶಿವಪ್ಪ.—ಈಗ ಯೂನಿವರ್ಸಿಟಿಯಲ್ಲಿ ಪೋಸ್ಟ್ ಗ್ರಾಜುಯೇಟ್ ಕೋರ್ಸ್‌ಗೆ ಚುನಾಯಿಸಲು ಒಂದು ಸಮಿತಿಯಿದೆ. ಅದೇ ಸಮಿತಿಗೆ ಹೈಸ್ಕೂಲು ಉಪಾಧ್ಯಾಯರನ್ನು ಚುನಾಯಿಸುವ ಕೆಲಸವನ್ನೂ ವಹಿಸುವುದು ಉತ್ತಮವಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಈಗ ಸೂಕ್ತ ತೋರಿದಂತೆ ಮಾಡುತ್ತಿದ್ದಾರೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಈಗ ನಿಯೋಜಿಸಲಾಗಿರುವ ಉಪಾಧ್ಯಾಯರಿಗೆ ವ್ಯಾಸಂಗದ ಅವಧಿಯೆಷ್ಟು? ಅವರಿಗೆ ಎಷ್ಟು ಸರ್ವೀಸ್ ಆಗಿರಬೇಕು?

ಶ್ರೀ ಎಸ್. ಆರ್. ಕಂಠಿ.—ಅವಧಿ ಎರಡು ವರ್ಷಗಳು, 5 ವರ್ಷಗಳ ಸರ್ವಿಸ್ ಆಗಿರಬೇಕು. ಬ್ಯಾಕ್‌ವರ್ಡ್ ಕಮ್ಯೂನಿಟಿಯವರಿಗೆ 4 ವರ್ಷ, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ನವರಿಗೆ 3 ವರ್ಷ ಸರ್ವಿಸ್ ಆಗಿದ್ದರೆ ಸಾಕು.

ಶ್ರೀ ಪಿ. ವೆಂಕಟಗಿರಿಯಪ್ಪ.—ಸೆಲೆಕ್ಷನ್ ಕೆಲಸವನ್ನು ಒಂದು ಸಮಿತಿಗೆ ವಹಿಸುವುದು ಒಳ್ಳೆಯದಲ್ಲವೆ?

ಶ್ರೀ ಎಸ್. ಆರ್. ಕಂಠಿ.—ಅದಕ್ಕಾಗಲೇ ಉತ್ತರ ಹೇಳಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮುಂದಾದರೂ ಸರ್ಕಾರ ಇನ್ನು ಕೆಲವರನ್ನು ತೆಗೆದುಕೊಳ್ಳುವಾಗ ಈಗ ಅರ್ಜಿ ಹಾಕಿರುವವರ ಪೈಕಿ ಉಳಿದಿರುವವರಿಗೆ ಅವಕಾಶ ಕೊಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಹಾಗೆ ಮಾಡುವುದಕ್ಕಾಗುವುದಿಲ್ಲ. ಪ್ರತಿ ವರ್ಷ ಅರ್ಜಿ ಕರೆಯುತ್ತೇವೆ. ಆಗ ಮತ್ತೆ ಹಾಕಿದರೆ ಪರಿಶೀಲಿಸಲಾಗುತ್ತದೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಬರುವ ವರ್ಷ ಹೈಯರ್ ಸೆಕೆಂಡರಿ ಶಾಲೆ ಮಾಡುವುದಿಲ್ಲವೆಂದು ಹೇಳುವುದು ಕೇಳಿಬರುತ್ತಿದೆ. ಹಾಗಾದರೆ ಬರುವ ವರ್ಷ ಟ್ರೈನಿಂಗಿಗೆ ತೆಗೆದುಕೊಳ್ಳುವುದಿಲ್ಲವೆ?

ಶ್ರೀ ಎಸ್. ಆರ್. ಕಂಠಿ.—ಮುಂದೆ ನೂರು ಶಾಲೆಗಳನ್ನು ಹೈಯರ್ ಸೆಕೆಂಡರಿ ಶಾಲೆಗಳಾಗಿ ಪರಿವರ್ತಿಸಬೇಕೆಂದಿದೆ. ಈಗ ಕೆಲವು ಪರಿವರ್ತನೆಯಾಗಿವೆ. ಅವುಗಳಿಗಾದರೂ ಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಯೂನಿವರ್ಸಿಟಿ ಸಮಿತಿಯು ಮೆರಿಟ್ ಪ್ರಕಾರ ಆರಿಸುವುದು, ಅಧಿಕಾರಿಗಳು ಮತ್ತು ಇಲಾಖೆ ಆರಿಸುವಾಗ ಮೆರಿಟ್ ಮತ್ತು ಇತರ ಯಾವ ವಿಷಯಗಳ ಕಡೆಗೂ ಗಮನಕೊಡುವುದಿಲ್ಲ, ಈ ವ್ಯತ್ಯಾಸವಿರುವುದು ತಮ್ಮ ಅವಗಾಹನೆಗೆ ಬಂದಿದೆಯೆ?

ಶ್ರೀ ಎಸ್. ಆರ್. ಕಂಠಿ.—ಈಗಲೂ ಮೆರಿಟ್, ಸರ್ವಿಸ್ ಮುಂತಾದವನ್ನೆಲ್ಲಾ ಗಮನಿಸಿಯೇ ಅವಕಾಶ ಕೊಡಲಾಗುತ್ತಿದೆ, ಬಹಳ ವಯಸ್ಸಾದವರನ್ನು ತೆಗೆದು ಕೊಳ್ಳದೆ 5 ವರ್ಷ ಸರ್ವಿಸ್ ಆಗಿ ಮೆರಿಟ್ ಹೊಂದಿರುವವರನ್ನು ಚುನಾಯಿಸಲಾಗುತ್ತಿದೆ.

Smt. VIJAYA RAGHAVENDRA RAO DESAI.—What is the maximum number that you depute?

Sri S. R. KANTHI,—The maximum number for the whole period is 350.

ಶ್ರೀ ಎಸ್. ಸುಬ್ಬಯ್ಯನಾಯಕ್.—ಈಗಿರುವ ಶಾಲೆಗಳಲ್ಲಿ ಸಾಕಷ್ಟು ಪೋಸ್ಟ್ ಗ್ರಾಜುಯೇಟ್ ಕೋರ್ಸ್ ಮುಗಿಸಿದ ಉಪಾಧ್ಯಾಯರುಗಳಿಲ್ಲವೆ?

ಶ್ರೀ ಎಸ್. ಆರ್. ಕಂಠಿ.—ಕೆಲವಟ್ಟಿಗೆ ಆ ಪರಿಸ್ಥಿತಿಯಿದೆ. ಅದನ್ನು ನಿವಾರಿಸುತ್ತಿದ್ದೇವೆ.

Sri B. P. KADAM.—May I know whether influence also primarily includes merit?

Sri S. R. KANTHI.—That the Hon'ble Member knows.

ಶ್ರೀ ಡಿ. ಎಂ. ಸಿದ್ದಯ್ಯ.—84 ಮಂದಿಯಲ್ಲಿ ಆರ್ಟ್ಸ್ ಮತ್ತು ಸೈನ್ಸ್ ಗ್ರಾಜುಯೇಟ್ಸ್ ಎಷ್ಟು ಜನ ಇದ್ದಾರೆ?

Sri S. R. KANTHI.—That breakup is not with me, but I may say that most of them are Science graduates.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈಗಿನ ಸೆಲೆಕ್ಷನ್‌ನಲ್ಲಿ ಇಂಟರ್‌ವ್ಯೂಗೆ ಹೆಚ್ಚು ನಂಬರಿರುವುದರಿಂದ ಅರ್ಜಿದಾರರಿಗೆ ಅತೃಪ್ತಿಯುಂಟಾಗಿರುವುದು ಗಮನಕ್ಕೆ ಬಂದಿದೇಯೆ?

ಶ್ರೀ ಎಸ್. ಆರ್. ಕಂಠಿ.—ಇದಕ್ಕೆ ಇಂಟರ್‌ವ್ಯೂನೇ ಇಲ್ಲ.

ಶ್ರೀಮತಿ ಬಸವರಾಜೇಶ್ವರಿ.— ಈ ತರಬೇತಿಗೆ ಎಷ್ಟು ಖರ್ಚಾಗುತ್ತದೆ?

ಶ್ರೀ ಎಸ್. ಆರ್. ಕಂಠಿ.— ಆರು ಸಾವಿರ ರೂಪಾಯಿ ಬೇಕು ಎಂದು ಕಾಣುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ವಿಷಯದಲ್ಲಿ ಸಾಮಾನ್ಯವಾಗಿ ದಕ್ಷಿಣ ದಿಕ್ಕಿನ ಪ್ರಭಾವ ಹೆಚ್ಚಾಗಿದೆಯೆಂಬುದು ಗೊತ್ತಿದೆಯೆ?

ಶ್ರೀ ಎಸ್. ಆರ್. ಕಂಠಿ.—ಯಾವ ದಿಕ್ಕಿನ ಪ್ರಭಾವವೂ ಇಲ್ಲ.

Sri S. M. KRISHNA.—The Hon'ble Minister said that no interview was conducted. Are we to take it that selections were made purely on the basis of the testimonials?

Sri S. R. KANTHI.—The procedure is that, after calling for applications, the reports of the Head Masters are called for; and after getting them, the officers look into them and make the selection.

Sri B. P. KADAM.—Is it a fact that the North Kanara and Bidar Districts have no merit at all?

Sri S. R. KANTHI.—They have enough merit

ಶ್ರೀ ಗಂಗಾಧರ ನಾಮೋಷಿ.—ಈ 84 ಜನರಲ್ಲಿ ಉರ್ದು ಬರುವವರು ಎಷ್ಟು ಜನರಿದ್ದಾರೆ?

ಶ್ರೀ ಎಸ್. ಆರ್. ಕಂಠಿ.—ಗೊತ್ತಿಲ್ಲ.

ಶ್ರೀ ಜಿ. ವೆಂಕಟೇಗೌಡ.—ಈ ಸಂಬಂಧದಲ್ಲಿ ನ್ಯಾಯ ದೊರಕುತ್ತಿದೆ ಎಂದು ಊಹಿಸಲು ತಕ್ಕ ವಾತಾವರಣ ಕಲ್ಪಿಸುವುದು ಒಳ್ಳೆಯದಲ್ಲವೆ. ಅದಕ್ಕೆ ಎಜುಕೇಷನ್ ಸೆಕ್ರೆಟರಿ, ಡೆಪ್ಯೂಟಿ ಸೆಕ್ರೆಟರಿ ಮುಂತಾದವರು ಸೇರಿ ಚುನಾಯಿಸುವುದು ಉತ್ತಮವಲ್ಲವೆ?

ಶ್ರೀ ಎಸ್. ಆರ್. ಕಂಠಿ.—ಇದು mainly departmental question. ಸಂಬಂಧಪಟ್ಟವರು ಈ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಈ 84 ಮುಂದಿಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ನವರಿದ್ದಾರೆಯೇ?

ಶ್ರೀ ಎಸ್. ಆರ್. ಕಂಠಿ.—ಇದ್ದಾರೆ. ಎಷ್ಟು ಮುಂದಿ ಇದ್ದಾರೆಂದು ಹೇಳಲು ಸಾಧ್ಯವಿಲ್ಲ.

Sri B. P. KADAM.—Is it a fact that the Mysore District has the monopoly in merit and everything?

MR. SPEAKER.—I disallow this supplementary.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬ್ಯಾಕ್‌ವರ್ಡ್ ಮತ್ತು ಫಾರ್ವರ್ಡ್ ಎಂದು ಬೇಧ ಮಾಡುವುದು ಸುಪ್ರೀಂ ಕೋರ್ಟಿನ ತೀರ್ಮಾನದಿಂದ ನಿಲ್ಲಬೇಕಲ್ಲವೆ?

ಶ್ರೀ ಎಸ್. ಆರ್. ಕಂಠಿ.—ಜಾತಿಯ ಆಧಾರದ ಮೇಲೆ ಬ್ಯಾಕ್‌ವರ್ಡ್ ಎಂದು ಹೇಳುವುದಕ್ಕಾಗುವುದಿಲ್ಲ, ಆದರೆ ಕ್ರೈಟೀರಿಯ ಗೊತ್ತುಮಾಡಿ ಮುಂದು ವರೆಯಬಹುದೆಂದು ತಿಳಿಸಲಾಗಿದೆ.

ಶ್ರೀ ಅನ್ನದಾನಯ್ಯ.—ರಾಜ್ಯಾಂಗದ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ನವರಿಗೆ ಸೇಕಡ 18ರಷ್ಟು ರಿಸರ್ವ್ ಮಾಡಿದ್ದೀರಾ?

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಹಾಗಿಲ್ಲ. ಕೊಡಬೇಕಾದ್ದನ್ನು ಕೊಡುತ್ತೇವೆ.

2 P. M.

ಶ್ರೀ ಬಿ. ಎಜ್. ಲಕ್ಷ್ಮಣಯ್ಯ.—ರಾಜ್ಯಾಂಗದ ಪ್ರಕಾರ Backward classes ಮತ್ತು Scheduled Castesಗೆ ಎಷ್ಟು ಮೀಸಲಿಡಬೇಕೆಂದಿದೆ?

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ reservation ಪ್ರಶ್ನೆ ಬರುವುದಿಲ್ಲ, Scheduled Caste ನವರಿಗೆ ಎಷ್ಟು ಕೊಡಬೇಕೋ ಅಷ್ಟು ಕೊಟ್ಟಿದ್ದಾರೆ.

ಶ್ರೀ ಎಚ್. ಶರಣಪ್ಪ.—ಇದಕ್ಕೆ ಆರಿಸುವಾಗ ಬರೇ ಬಿ.ಎ., ಬಿ.ಎಸ್‌ಸಿ. ಗಳನ್ನೇ ತೆಗೆದುಕೊಂಡಿದ್ದಾರೆ. ಬೇರೆಯವರಿಗೆ ಅವಕಾಶ ಕೊಟ್ಟಿಲ್ಲ, ಕಾರಣವೇನು?

ಶ್ರೀ ಎಸ್. ಆರ್. ಕಂಠಿ.—Post graduate ಶಿಕ್ಷಣವೆಂದರೆ, ಎಂ.ಎ., ಎಂ.ಎಸ್‌ಸಿ. ಆದಕಾರಣ ಬಿ.ಎ., ಬಿ.ಎಸ್‌ಸಿ., ಆದವರನ್ನೇ ಚುನಾಯಿಸುತ್ತಾರೆ.

ಶ್ರೀಮತಿ ಅನ್ನಪೂರ್ಣಾಬಾಯಿ.—ಇಂಥಿಂಥ Subjects ನಲ್ಲಿ ಇಷ್ಟಿಷ್ಟು ಜನರನ್ನು ಕಳುಹಿಸಬೇಕೆಂಬ ನಿಯಮವಿದೆಯೆ?

ಶ್ರೀ ಎಸ್. ಆರ್. ಕಂಠಿ.—ಹೌದು, ಪ್ರತಿಯೊಂದು subjectsನಲ್ಲಿಯೂ ಇಷ್ಟಿಷ್ಟು ಎಂದಿದೆ, ಅಗತ್ಯಕ್ಕೆ ತಕ್ಕಂತೆ ನೋಡಿ ಕಳುಹಿಸಬೇಕು.

ಶ್ರೀ ಕೆ. ಎಚ್. ರಂಗನಾಥ್.—ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಬೇರೆ ಎಲ್ಲ ಡಿಸ್ಟ್ರಿಕ್ಟ್‌ಗಿಂತ ಹೆಚ್ಚಾಗಿದೆ, ಯಾರಾದರೂ ಸ್ವಾಮಿಗಳು ಪ್ರಭಾವ ಬೀರಿದರೆ?

MR. SPEAKER. — I disallow this supplementary. It need not be answered.

Sri G. V. GOWDA.—We have got reliable instruction, Sir.